ದಿನಾಂಕ 24.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ ಕೆ.ಪಿ.ಬಿ ವಕೀಲರಿಂದಃ-**

ನಾನು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿರುವುದಿಲ್ಲ. ನನ್ನ ಮಾವನಾದ ಸಿ.ಪಿ ಪೆಮ್ಮಯ್ಯ ಮತ್ತು 1 ನೇ ಪ್ರತಿವಾದಿಯು ದಿನಾಂಕ 19.03.1994 ರಂದು ಒಂದು ಕರಾರುಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಸದರಿ ಕರಾರುಪತ್ರವನ್ನು ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಮಾವನಾದ ಸಿ.ಪಿ ಪೆಮ್ಮಯ್ಯ 1 ನೇ ಪ್ರತಿವಾದಿಯು ತಂದೆಯ ಬಳಿ ಹಣವನ್ನು ಸಾಲವಾಗಿ ಪಡೆದ ವಿಚಾರಕ್ಕೆ ಸಂಬಂಧಿಸಿದಂತೆ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಕರಾರುಪತ್ರದಡಿ ನನ್ನ ಮಾವ ರೂ. 15,000/- ಹಣವನ್ನು ಪಡೆದುಕೊಂಡಿರುತ್ತಾರೆ. 1994 ನೇ ಇಸವಿಯಲ್ಲಿ ದಾವಾಸ್ವತ್ತು ಬಾಣೆ ಜಾಗ

ಆಗಿತ್ತು ಎಂದರೆ ಸರಿ. ದಾವಾಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ 1 ನೇ ಪ್ರತಿವಾದಿಯು ಖರೀದಿಸಿರುವ ಜಮೀನು ಇದೆ ಎಂದರೆ ಸರಿ.

1994 ನೇ ಇಸವಿಯಲ್ಲಿ ನನ್ನ ಮಾವ ಹಳ್ಳಿಗಟ್ಟು ಗ್ರಾಮದಲ್ಲಿ ಇದ್ದಂತಹ ತಮ್ಮ ಹಳೆಯ ಮನೆಯನ್ನು ನವೀಕರಣ ಮಾಡಿರುತ್ತಾರೆ. ಸದರಿ ನವೀಕರಣಕ್ಕಾಗಿ ತುಂಬಾ ಹಣ ಖರ್ಚು ಮಾಡಿದ್ದರು ಎಂದರೆ ಸರಿ. ನನ್ನ ಮಾವನಿಗೆ ಹಣದ ಅವಶ್ಯಕತೆ ಇದ್ದುದ್ದರಿಂದ ದಾವಾಸ್ವತ್ತನ್ನು ರೂ. 35,000/- ಗಳಿಗೆ 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕರಾರುಪತ್ರದಡಿ ನನ್ನ ಮಾವ ರೂ. 5,000/- ಮತ್ತು ರೂ. 20,000/- ಹಣವನ್ನು ಎರಡು ಬಾರಿ 1 ಪ್ರತಿವಾದಿಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿದ ಬಳಿಕ ಉಳಿದ ರೂ. 10,000/- ಹಣವನ್ನು ನೀಡುವುದಾಗಿ ಒಪ್ಪಂದವಾಗಿತ್ತು ಎಂದರೆ ಸರಿಯಲ್ಲ. ಕರಾರುಪತ್ರವಾದ ದಿವಸವೇ ದಾವಸ್ವತ್ತಿನ

ಸ್ವಾಧೀನವನ್ನು 1 ನೇ ಪ್ರತಿವಾದಿಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಆ ಬಗ್ಗೆ ಕರಾರುಪತ್ರದಲ್ಲಿ ಬರವಣಿಗೆ ಮಾಡಿ, ನನ್ನ ಮಾವನವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕರಾರುಪತ್ರದ ನಕಲು ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಮಾವನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

1 ನೇ ಪ್ರತಿವಾದಿಯು ದಾವಾಸ್ವತ್ತಿನಲ್ಲಿ ವಾಸದ ಮನೆ, ವಾಹನಗಳನ್ನು ನಿಲ್ಲಿಸುವ ಷೆಡ್, ಲೇಬರ್ ಲೈನ್, ರಸ್ತೆ ಮತ್ತು ಕಾಫಿ ಕಣವನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. 10 ದಿನಗಳ ಹಿಂದೆ ನಾನು ದಾವಾಸ್ವತ್ತನ್ನು ನೋಡಿರುತ್ತೇನೆ. ದಾವಾಸ್ವತ್ತಿನಲ್ಲಿ ಕಾಫಿ ಗಿಡಗಳು, ಮೆಣಸು ಮತ್ತು ಬಾಳೆ ಬೆಳೆಗಳು ಇವೆ. ಸದರಿ ಬೆಳೆಗಳನ್ನು 1 ನೇ ಪ್ರತಿವಾದಿಯು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. 1992 ರಲ್ಲಿ ನನ್ನ ಮಾವ ಕಾಫಿ ಗಿಡಗಳನ್ನು ನೆಟ್ಟಿರುತ್ತಾರೆ. ನಾನು ವಾದಿ 1 (ಬಿ) ರವರನ್ನು 1992 ರಲ್ಲಿ ವಿವಾಹವಾಗಿರಲಿಲ್ಲ. ಆದುದ್ದರಿಂದ ನನ್ನ ಮಾವ ದಾವಾಸ್ವತ್ತಿನಲ್ಲಿ ಕಾಫಿ ಕೃಷಿ ಮಾಡಿದ

ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾಸ್ವತ್ತು ಮೂಲತಃ ಸರ್ಕಾರಿ ಪೈಸಾರಿ ಜಾಗವಾಗಿದ್ದು, ಅದರ ಪಹಣಿಯು ಈಗಲೂ ಸಹಾ ಸರ್ಕಾರದ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. **1989** ನೇ ಇಸವಿಯಲ್ಲಿ ದಾವಾಸ್ವತ್ತು ನನ್ನ ಮಾವನಿಗೆ ಮಂಜೂರು ಆಗಿರುತ್ತದೆ. ಮಂಜೂರಾತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾಸ್ವತ್ತು ನನ್ನ ಮಾವನಿಗೆ ಮಂಜೂರಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ **31.12.2015** ರಂದು ನನ್ನ ಮಾವ ಅವರ ಮನೆಯಲ್ಲಿ ಇದ್ದರು. ಆ ದಿನ ಮಧ್ಯಾಹ್ನ **3.00** ಗಂಟೆಗೆ ಅವರು ದಾವಾ ಸ್ವತ್ತಿನ ಬಳಿ ಹೋಗಿದ್ದರು. ಆ ಸಂದರ್ಭದಲ್ಲಿ ನಾನು ಅವರ

ಜೊತೆ ಇರಲಿಲ್ಲ. ದಾವಾಸ್ವತ್ತಿನ ಬಳಿ ಹೋಗುವುದಾಗಿ ಅದೇ ದಿನ ಮಧ್ಯಾಹ್ನ ನನ್ನ ಮಾವ ನನಗೆ ಫೋನ್ ಮಾಡಿ ತಿಳಿಸಿದ್ದರು. ದಾವಾಸ್ವತ್ತಿಗೆ ಬೇರೆ ವ್ಯಕ್ತಿಗಳು ಅಕ್ರಮ ಪ್ರವೇಶ ಮಾಡಿರುವುದಾಗಿ ಅವರಿಗೆ ಮಾಹಿತಿ ಬಂದಿದ್ದರಿಂದ, ಅವರು ದಾವಾಸ್ವತ್ತಿನ ಬಳಿ ಹೋಗಿರುತ್ತಾರೆ. ಆ ದಿನ ಸಂಜೆ 6.30 ಗಂಟೆಗೆ ನನ್ನ ಮಾವ ಮನೆಗೆ ಹಿಂತಿರುಗಿ ಬಂದಿರುತ್ತಾರೆ.

1992 ನೇ ಇಸವಿಯಲ್ಲಿ ನನ್ನ ಮಾವ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದುದ್ದರಿಂದ ಅವರು ದಾವಾಸ್ವತ್ತಿನಲ್ಲಿ ಕೃಷಿ ಚಟುವಟಿಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1994 ರಲ್ಲಿ 1 ನೇ ಪ್ರತಿವಾದಿಗೆ ಕರಾರುಪತ್ರವನ್ನು ನನ್ನ ಮಾವ ಬರೆದುಕೊಟ್ಟ ಬಳಿಕ, ಅವರು ದಾವಾಸ್ವತ್ತಿನಲ್ಲಿ ಕೃಷಿ ಚಟುವಟಿಕೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1994 ರಿಂದ ಇಂದಿನ ದಿನದವರೆಗೆ 1 ನೇ ಪ್ರತಿವಾದಿಯು ದಾವಾಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿರುವ ಮನೆಗೆ

ವಾದಿಯು ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡು, ಕಂದಾಯ ಪಾವತಿ ಮಾಡುತ್ತಿರುವುದರಿಂದ ಬಿ ಶೆಟ್ಟಿಗೇರಿ ಪಂಚಾಯಿತಿಯವರು 1 ನೇ ಪ್ರತಿವಾದಿಗೆ ವಾಸದ ದೃಢೀಕರಣವ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಸಂಬಂಧಿಸಿದ ಎಲ್ಲಾ ಸರ್ಕಾರಿ ದಾಖಲೆಗಳು ದಾವಾಸ್ವತ್ತಿನಲ್ಲಿರುವ ಮನೆಯ ವಿಳಾಸದಲ್ಲಿವೆ ಎಂದರೆ ಸರಿಯಲ್ಲ. ದಿನಾಂಕ 19.01.2016 ರಂದು ನನ್ನ ಮಾವ ದಾವಾಸ್ವತ್ತಿನ ಬಳಿ ಹೋಗಿ, 1 ನೇ ಪ್ರತಿವಾದಿಯೊಂದಿಗೆ ಜಗಳ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಘಟನೆಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯು ನನ್ನ ಮಾವನ ವಿರುದ್ದ ಗೋಣಿಕೊಪ್ಪ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು, ಸದರಿ ದೂರಿನ ವಿಚಾರಣೆಗೆ ನಾನು ನನ್ನ ಮಾವನೊಂದಿಗೆ ಪೋಲೀಸ್ ಠಾಣೆಗೆ ಹೋಗಿದ್ದೆನು ಎಂದರೆ ಸರಿಯಲ್ಲ. ನನ್ನ ಮಾವ ಪೋಲೀಸ್ ಠಾಣೆಗೆ

ಹೋದ ಸಂದರ್ಭದಲ್ಲಿ ದಿನಾಂಕ **20.01.2016** ರಂದು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ.

ಸದರಿ ಹೇಳಿಕೆಯಲ್ಲಿ ನನ್ನ ಮಾವ ಸಿಕಂದರಾಬಾದಿನಲ್ಲಿ ಸೇವೆ ಸಲ್ಲಿಸುತ್ತಿದುದ್ದರಿಂದ ದಾವಾಸ್ವತ್ತಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು **1** ನೇ ಪ್ರತಿವಾದಿಗೆ ನೀಡಿದ್ದನು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದೇ ಇರುವುದರಿಂದ ದಾವೆಯಲ್ಲಿ ನಾವು ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಪೈಸಾರಿ ಜಾಗವಾಗಿರುವುದರಿಂದ ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವೆಯನ್ನು ದಾಖಲಿಸಿದ ಬಳಿಕ, ನಾನು ನನ್ನ ಮಾವನೊಂದಿಗೆ ದಾವಾಸ್ವತ್ತಿನ ಬಳಿ ಹೋಗಿ, **1** ನೇ ಪ್ರತಿವಾದಿಯೊಂದಿಗೆ ಆಗಾಗ್ಗೆ ಜಗಳ

ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆದುದ್ದರಿಂದ 1 ನೇ ಪ್ರತಿವಾದಿಯು ಎದುರು ಕ್ಲೈಮ್ ನಲ್ಲಿ ಕೇಳಿರುವಂತಹ ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ 4 ಮಂಚಳ್ಳಿ ಗ್ರಾಮದ ಸರ್ವೆ ನಂ. 125/7 ಕ್ಕೆ ಸಂಬಂಧಿಸಿದ್ದು ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲು ಮಂಚಳ್ಳಿ ಗ್ರಾಮಕ್ಕೆ ಸೇರಿಸಿದ್ದು, ನಂತರ ಸದರಿ ಜಾಗಕ್ಕೆ ಬದಲಿಯಾಗಿ ಕೊಂಗಣ ಗ್ರಾಮದ ಸರ್ವೆ ನಂ. 130/1 ರ ಜಾಗದಲ್ಲಿ ಮಂಜೂರಿ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಆ ರೀತಿ ಕೊಂಗಣ ಗ್ರಾಮದಲ್ಲಿ ಯಾವುದೇ ಆಸ್ತಿ ನನ್ನ ಮಾವನಿಗೆ ಮಂಜೂರು ಆಗದೇ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ
(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.